**Code No. 10 X(E)**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜೂನ್, 2016

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಚಾಮರಸ ಕನ್ನಡದ ಹೆಮ್ಮೆಯ ಕವಿ. ಅವನು ತನ್ನ ಕಾವ್ಯ ಪ್ರಭುಲಿಂಗ ಲೀಲೆಯ ಆರಂಭದಲ್ಲಿ ಕಾವ್ಯವನ್ನು ಓದುವರು ಯಾವ ಬಗೆಯ ದೃಷ್ಟಿಕೋನವನ್ನು, ರಸಗ್ರಾಹಿ ಗುಣವನ್ನು, ಪಡೆದಿರಬೇಕು ಎಂಬ ಬಗ್ಗೆ ಹೀಗೆ ವಿಜ್ಞಾಪಿಸಿಕೊಂಡಿದ್ದಾನೆ. ಕಾವ್ಯವೆಂಬ ಕಬ್ಬಿನ ತೋಟಕ್ಕೆ ಕುರಿಯಂತೆ ಹೊಕ್ಕು ಬರೀ ನೀರಸವಾದ ಗರಿಯನ್ನು ಮೇದು ಅಲ್ಪ ಸುಖವನ್ನು ಪಡೆದರೆ ಸಾಲದು, ಆನೆಯು ಕಬ್ಬಿನ ಜಲ್ಲೆಯಲ್ಲಿ ಹುದುಗಿರುವ ತನಿರಸವನ್ನು ಹೀರುವಂತೆ ಓದುಗ ಕಾವ್ಯಾಸ್ವಾದ ಮಾಡುವ ರಸಿಕನಾಗಬೇಕು ಎಂಬುದು ಆತನ ಅಭಿಪ್ರಾಯ. ಬಸವಣ್ಣನವರು ತಮ್ಮ ವಚನವೊಂದರಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ. ಭಗವಂತನ ಇರವನ್ನು ಅರಿಯಬಲ್ಲವನು ಆನೆಯಂಥ ರಸಜ್ಞನೇ ಹೊರತು ನರಿಗುರಿಯಲ್ಲ ಎಂದಿದ್ದಾರೆ ಅವರು. ಈ ಮಾತನ್ನು ನಾವು ಬುದುಕಿಗೂ ಅನ್ವಯಿಸಬಹುದು, ನಾವು ಈ ಬಾಳು ಎಂಬ ಕಬ್ಬಿನ ತೋಟದಲ್ಲಿದ್ದೇವೆ. ನಾವು ಕುರಿಗಳಂತೆ ಅಲ್ಪತೃಪ್ತರಾಗಿ ನರಗುರಿಗಳಂತೆ ಇರಬೇಕೋ ಅಥವಾ ಆನೆಯ ಹಾಗೆ ರಸಜ್ಞರಾಗಿ ಅರ್ಥಪೂರ್ಣ ಬದುಕನ್ನು ನಡೆಸಬೇಕೋ ಎಂಬುದು ಪ್ರಶ್ನೆ.

ನಾವು ಕುರಿಗಳಂತೆ ಬಾಳಿದರೆ ಬಾಳಿನ ಅನೇಕ ರಸಮಯ ಸನ್ನಿವೇಶಗಳಿಂದ, ಜೀವನ ಮೌಲ್ಯಗಳಿಂದ ವಂಚಿತರಾಗುತ್ತೇವೆ. ಬಾಳಿನ ರಸಸ್ಥಾನಗಳನ್ನು ಗುರುತಿಸಿ ಅವುಗಳನ್ನು ರಸಜ್ಞರಾಗಿ ಅನುಭವಿಸಿದರೆ ಬಾಳು ಸಾರ್ಥಕವಾಗುತ್ತದೆ. ಆದರೆ ಬಾಳಿನ ರಸಸ್ಥಾನಗಳನ್ನು ಕಂಡುಕೊಳ್ಳುವುದು ಹಾಗೂ

[ Turn over

ಅವುಗಳಲ್ಲಿ ಪಾಲ್ಗೊಂಡು ಅನುಭವಿಸುವುದು ಅಷ್ಟು ಸುಲಭವಲ್ಲ. ಅದಕ್ಕೆ ಸಹೃದಯತೆ ಬೇಕು, ಸದಭಿರುಚಿ ಬೇಕು, ರಸಗ್ರಾಹಿಗುಣ ಬಾಳಿನ ಮೌಲ್ಯಗಳನ್ನು ಗುರುತಿಸುವ ಸಮರ್ಥ ಸಾಧನ. ನಮ್ಮಲ್ಲಿ ಒಳ್ಳೆಯ ಅಭಿರುಚಿ ಇದರೆ ಸಾಕು, ಉಳಿದದ್ದು ತಾನಾಗೇ ಸೇರ್ಪಡುತ್ತದೆ. ಇನಿವಣ್ಣಳಿಗೆ ಬಿಸುಟ್ಟೊಯ್ಯನೆ ವನಮಂಪೊಕ್ಕು ಕಾಕನೊಲ್ವುದು ಗಿಡ ಬೇವಿನ ಪಣ್ಣಂ ಎಂದು ಕವಿ ಷಡಕ್ಷರಿ ಹೇಳುತ್ತಾನೆ. ರಸಪೂರ್ವವಾದ ಹಣ್ಣುಗಳು ತುಂಬಿದ ತೋಟವನ್ನು ಹೊಕ್ಕ ಗಿಳಿ ಹಾಗೂ ಕಾಗೆಗಳ ಅಭಿರುಚಿಯಲ್ಲಿ ಎಷ್ಟು ವ್ಯತ್ಯಾಸ. ಗಿಳಿ ರಸಭರಿತವಾದ ಮಾವಿಗೋ, ದಾಳಿಂಬೆಗೋ, ಬಾಳೆಗೋ ಎರಗಿದರೆ, ಕಾಗೆ, ಪಾಪ, ಬೇವಿನ ಹಣ್ಣನ್ನು ತಿನ್ನಲು ಹೋಗುತ್ತದೆ. ಇಂಥ ಉತ್ತಮವಾದ ರಸಗ್ರಾಹಿ ಗುಣವು ಕ್ರಿಯಾತ್ಮಕವಾಗಲು ಸಾಧಕ ಬುದ್ಧಿಬೇಕು.

ಕಬ್ಬನ್ನು ತಿನ್ನುವುದು ದ್ರಾಕ್ಷಿ ತಿನ್ನುವಷ್ಟು ಸುಲಭವಲ್ಲ, ಅದಕ್ಕೆ ಸಾಹಸಕ್ರಿಯೆಬೇಕು, ದಕ್ಷತೆಬೇಕು. ಆದ್ದರಿಂದ ಜೀವನದ ಸತ್ವಬೇಕು ಎನ್ನುವವರು ಕ್ರಿಯಾಶಾಲಿಗಳಾಗಬೇಕು. ಸಮುದ್ರದ ದಂಡೆಯಲ್ಲೇ ನೊರೆತೆರೆಗಳಲ್ಲಿ ಅಡಿ, ಮೇಲೆ ಮೇಲೆ ಹುಡುಕುವವನಿಗೆ ಸಿಕ್ಕುವುದು ಕೇವಲ ಕಪ್ಪೆ ಚಿಪ್ಪು, ಗುಳ್ಳೆ ಗೊರಚೆ, ಅಷ್ಟೆ. ಸಮುದ್ರದ ಆಳಕ್ಕೆ ಮುಳುಗಿ ಅರಸಬಲ್ಲ ಸಾಹಸಿಗೆ ದೊರೆಯುವುದು ಮುತು, ರತ್ನ. ಈ ಬಾಳ್ಗಡಲಿನಲ್ಲಿ ಅನರ್ಘ್ಯರತ್ನಗಳಿವೆ ಬದುಕನ್ನು ಸಂಪನ್ನಗೊಳಿಸುವ ಮೌಲ್ಯಗಳಿವೆ, ಅವುಗಳನ್ನು ಕಂಡುಕೊಳ್ಳುವವ ಸೂಕ್ಷ್ಮಮತಿ.